ಟಾಂ ಟಾಂ ಮಾಡಿ ಭಿತ್ತಿ ಪತ್ರಗಳನ್ನು ಹಂಚಿದ್ದೇವೆ. ಬಿಜಾಪುರದಲ್ಲಿ ಕೆಲವು ರೈತರಿಗೆ ಹೊರಗಡೆ ಹೋಗತಕ್ಕಂತಹ ಅಭ್ಯಾಸ ಇರುವುದರಿಂದ, ಅವರು ಹೇಳಿದ ಹಾಗೆ ಇನ್ನೂ ಬಹಳಷ್ಟು ಜನ ರೈತರನ್ನು ಈ ಯೋಜನೆಗೆ ಒಳಪಡಿಸುವುದಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ತೀವ್ರವಾಗಿ ಪ್ರಯತ್ನ ಮಾಡುತ್ತೇನೆ. ಒಂದೇ ವರ್ಷಕ್ಕೆ ಈ ಯೋಜನೆ ಇರುವುದಾದರೂ ಸಹ ಈ ಯೋಜನೆಯ ಪ್ರತಿ ಫಲವನ್ನು ಅನುಸರಿಸಿ ಇದನ್ನು ಮುಂದುವರಿಸುವ ಆಲೋಚನೆ ಇದೆ. ಮುಂದೆ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Mr. SPEAKER :- No clarifications during zerohour.

(ಖೂ) <u>ಅನಾಥಾಶ್ರಮದಲ್ಲಿನ ಹೆಣ್ಣು ಮಕ್ಕಳಿಗೆ ಉದ್ಯೋಗ</u>

ಶ್ರೀ ಸಿ. ಗುರುನಾಥ (ಶಹಬಾದ್) :- ಮಾನ್ಯ ಅಧ್ಯಕ್ಷರೆ, ಅನಾಥ ಹೆಣ್ಣುಮಕ್ಕಳು ಅನಾಥಾಶ್ರಮದಲ್ಲಿ ಇದ್ದಾರೆ. ಹಲವಾರು ಕಾರಣಕ್ಕಾಗಿ ಅನಾಥ ಆಶ್ರಮದಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳು ಇದ್ದಾರೆ. ಈ ಅನಾಥಾಶ್ರಮದಲ್ಲಿರತಕ್ಕಂತಹ ಹೆಣ್ಣು ಮಕ್ಕಳ ಬಗ್ಗೆ ಯಾರೂ ಚಿಂತೆ ಮಾಡುವ ಸ್ಥಿತಿಯಲ್ಲಿ ಇಲ್ಲ. ಅನೇಕ ಹೆಣ್ಣುಮಕ್ಕಳು ತಮ್ಮ ಬಾಲ್ಯದಿಂದ ಮುಪ್ಪಿನವರೆಗೆ ಅನಾಥಾಶ್ರಮದಲ್ಲಿ ಯಾವುದೇ ಸುಖ ಸಂತೋಷ ಪಡೆಯದೇ ಇದ್ದಾರೆ. ಅವರಿಗಾಗಿ ವಿಶೇಷವಾದ ಪ್ರಾತಿನಿಧ್ಯವನ್ನು ಶಿಕ್ಷಣದಲ್ಲಿ ಉದ್ಯೋಗದಲ್ಲಿ ಕೊಡಬೇಕೆಂದು ನನ್ನ ಅನಿಸಿಕೆ ಇದೆ. ಅನಾಥಾಶ್ರಮದಲ್ಲಿರತಕ್ಕಂತಹ ಗಂಡು ಮಕ್ಕಳು ಸ್ವಲ್ಪ ವಯಸ್ಸಾದ ನಂತರ ಅಲ್ಲಿಂದ ಹೊರಗೆ ಹೋಗಿ ಅವರು ತಮ್ಮ ಕಾಲ ಮೇಲೆ ನಿಲ್ಲತಕ್ಕಂತಹ ವ್ಯವಸ್ಥೆ ಮಾಡಿಕೊಳ್ಳಬಹುದು. ಆದರೆ ಹೆಣ್ಣುಮಕ್ಕಳ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಈ ಸಮಾಜದಲ್ಲಿ ಅವರು ಮದುವೆಯಾಗದೆ ಮುಪ್ಪನ್ನಪ್ಪಿದ್ದಾರೆ. ಅವರಿಗೆ ವೃತ್ತಿಪರ ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕೊಟ್ಟರೆ ಅವರು ತಮ್ಮ ಕಾಲ ಮೇಲೆ ನಿಲ್ಲಬಹುದು. ಅದರಿಂದ ಅವರ ಮದುವೆಯಾಗತಕ್ಕಂತಹ ಸಂದರ್ಭ ಕೂಡ ಬರುತ್ತದೆ. ಸರಕಾರ ಇಂತಹ ಅವಕಾಶವನ್ನು ಅವರಿಗೆ ಒದಗಿಸಿಕೊಡುವ ಪ್ರಯತ್ನ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀಮತಿ ಮಿಮಲಾಬಾಯಿ ದೇಶಮುಖ (ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಸಚಿವೆ):- ಮಾನ್ಯ ಗುರುನಾಥ್ ಅವರು ಹೇಳಿದ ಪ್ರಕಾರ ಅನಾಥ ಹೆಣ್ಣುಮಕ್ಕಳಿಗಾಗಿ ಅನಾಥಾಲಯದಲ್ಲಿ ಕೈಗಾರಿಕೋದ್ಯಮಗಳನ್ನು ಪ್ರಾರಂಭಿಸಿದ್ದೇವೆ. ಆದರೆ ವೃದ್ಧಾಶ್ರಮದಲ್ಲಿ ಅವರಿಗೆ ಮಾಡಲು ಕೆಲಸ ಇಲ್ಲದ್ದರಿಂದ ಅವರಿಗಾಗಿ ಯಾವುದೇ ಕೈಗಾರಿಕೆಯನ್ನು ಪ್ರಾರಂಭ ಮಾಡಿಲ್ಲ. 18 ವರ್ಷದವರೆಗೆ ನಾವು ಅನಾಥಾಲಯದಲ್ಲಿ ಶಿಕ್ಷಣ ಕೊಡುತ್ತೇವೆ. ಮುಂದಾದರೂ ಪರಿಶೀಲನೆ ಮಾಡಿ ಎಲ್ಲಾ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವ ವ್ಯವಸ್ಥೆ ಮಾಡುತ್ತೇವೆ.

(ಎ) <u>ಚಿಂಚೋಳಿಯ ಒಂದು ಗ್ರಾಮದಲ್ಲಿ ತೊಗರಿಬೆಳೆ ನಾಶವಾಗಿರುವುದರಿಂದ ರೈತರ ಆತ್ಮಹತ್ಯೆ</u>

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) :- ಚಿಂಚೋಳಿಯ ಒಂದು ಗ್ರಾಮದಲ್ಲಿ ಸುಬ್ಬಣ್ಣ ಹಡಪದ ಎಂಬ ಬಡ ರೈತ ತೊಗರಿ ಬೇಳೆ ಲಾಸಾದ್ದರಿಂದ ಅವನು ತನ್ನ ಎತ್ತುಗಳನ್ನು ಮಾರಿಕೊಂಡಿದ್ದಾನೆ. ಇಂತಹ ಪರಿಸ್ಥಿತಿಯಲ್ಲ ಅವನು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ವರದಿಯಾಗಿದೆ ಸರಕಾರ ಆತನ ಕುಟುಂಬಕ್ಕೆ ಪರಿಹಾರ ಕೊಡಬೇಕು. ತೊಗರಿ ಬೆಳೆ ನಾಶವಾದುದಕ್ಕಾಗಿ